ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ,

(ಮೈಸೂರು ವಿಶ್ವ ವಿದ್ಯಾನಿಲಯದಿಂದ ಹಾಗೂ ಎನ್‌ಸಿಟಿಇಯಿಂದ ಮಾನ್ಯತೆ ಪಡೆದಿದೆ)

ಕೌಡಳ್ಳಿ, ಪಿ.ಬಿ. ನಂ. 26, ಸಕಲೇಶಪುರ– 573 134, ಹಾಸನ ಜಿಲ್ಲೆ

ದೂರವಾಣಿ ಸಂಖ್ಯೆ ಪ್ರಾಂಶುಪಾಲರು : 9740591647, Email: jssioebedskp@gmail.com

## "ಅಂತರ ರಾಷ್ಟ್ರೀಯ ಯೋಗ ದಿನಾಚರಣೆ" ಒಂದು ಸಂಕ್ಷಿಪ್ತ ಕಾರ್ಯಕ್ರಮದ ವರದಿ.

ದಿನಾಂಕ 21.06.2023ರ ಸೋಮವಾರದಂದು ನಮ್ಮ ಕಾಲೇಜಿನಲ್ಲಿ **"ಅಂತರ ರಾಷ್ಟ್ರೀಯ ಯೋಗ ದಿನಾಚರಣೆ"** ಯನ್ನು ಸಂಪ್ರದಾಯದಂತೆ ಪ್ರಾರ್ಥನೆಯೊಂದಿಗೆ ಶ್ರೀಮತಿ ಚೈತ್ರ ಮತ್ತು ತಂಡದವರು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರನ್ನು ಕುಮಾರಿ ಶಿಲ್ಪ ಹೆಚ್ ಕೆ ಇವರು ಸ್ವಾಗತಿಸಿದರು. ಕಾರ್ಯಕ್ರಮವನ್ನು ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕಾಳೇಗೌಡರವರು ಯೋಗವು ಜೀವನದ ಒಂದು ಅವಿಭಾಜ್ಯ ಅಂಗವಾಗಿದ್ದು, ಇದು ಪ್ರಾಚೀನ ನಾಗರೀಕತೆಗಳಷ್ಟೆ ಹಳೆಯದಾದ ಶಾಸ್ತ್ರ, ಇದನ್ನು ನಾವು ಧರ್ಮಾತೀತವಾಗಿ, ಜಾತ್ಯಾತೀತವಾಗಿ, ಲಿಂಗಾತೀತವಾಗಿ ಅಭ್ಯಾಸ ಮಾಡಬಹುದು ಎಂದು ಹೇಳುತ್ತಾ, ಪ್ರಾಸ್ತಾವಿಕ ನುಡಿಗಳನ್ನಾಡಿದರು.






ನಂತರ ಯೋಗ ಶಿಕ್ಷಕರಾದ ಶ್ರೀ ಪ್ರಶಾಂತ್ ರವರು ಯೋಗದ ಇತಿಹಾಸ ಇದರ ಮಹತ್ವದ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಸವಿವರವಾಗಿ ತಿಳಿಸಿ, ನಂತರ ಸೂರ್ಯನಮಸ್ಕಾರ, ಭುಜಂಗಾಸನ, ವೃಕ್ಷಾಸನ, ತ್ರಿಕೋನಾಸನ, ಶವಾಸನ ಮುಂತಾದ ಆಸನಗಳನ್ನು ಮಾಡುವ ವಿಧಾನ, ಅವುಗಳ ಉಪಯೋಗಗಳ ಬಗ್ಗೆ ಪ್ರದರ್ಶನ ನೀಡಿದರು. ಕಾಲೇಜಿನ IQAC ಸಂಯೋಜಕರಾದ ಡಾ ದಿನೇಶ್ ಎಂ.ಕೆ ರವರು ಯೋಗ ಮತ್ತು ವ್ಯಕ್ತಿತ್ವ ವಿಕಸನದ ಬಗ್ಗೆ ತಿಳಿಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಕಾರ್ಯಕ್ರಮದ ಅಧ್ಯಕ್ಷೀಯ ನುಡಿಗಳನ್ನು ಆಡಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರನ್ನು ಪ್ರಶಿಕ್ಷಣಾರ್ಥಿ ಆಂಜನೇಯರವರು ವಂದಿಸಿದರು. ಕುಮಾರಿ ಶಿಫಾನರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಸಹಾಯಕ ಪ್ರಾಧ್ಯಪಕರುಗಳಾದ ಶ್ರೀ ನಂಜುಂಡಸ್ವಾಮಿ ಕೆ ಎಸ್, ಡಾ. ಪ್ರಭುಸ್ವಾಮಿ ಎಂ, ಡಾ ವಿಕ್ರಮ್ ಸಿ ಬಿ ಹಾಗೂ ಕಾಲೇಜಿನ ಬೋಧಕೇತರ ಸಿಬ್ಬಂಧಿವರ್ಗದವರು ಕಾರ್ಯಕ್ರಮದಲ್ಲಿ ಹಾಜರಿದ್ದರು.












PRINCIPAL
J.S.S. Institute of Education
P.B. 26, SAKALESHPUR-573 134
Hassan Dist